ಮತ್ತೆ ಮೌನ. ಭ್ರಾಂತಿ ಇರಬೇಕು. ಒಂದು ಮೊಂಬತ್ತಿಯನ್ನು ಉರಿಸಿ ಕೆಳಗೆ ಹನ್ನಾಳ ರೂಮಿನ ಕಡೆಗೆ ಹೆಜ್ಜೆ ಹಾಕಿದ. ಸ್ವಲ್ಪ ಹೊತ್ತು ನಿಶ್ಶಬ್ದವಾಗಿ ಕಲ್ಲಿನಂತೆ ನಿಂತುಕೊಂಡ. ನಂತರ ಮೆಲ್ಲಗೆ ಹನ್ನಾಳ ಬೀರನ್ನು ತೆರೆದು, ಉಳಿದ ಬಿಳಿ ಪುಡಿಯ ಪೊಟ್ಟಣವನ್ನು ಅವಳು ಜೋಡಿಸಿಟ್ಟಿದ್ದ ಬಟ್ಟೆಗಳ ಮಧ್ಯೆ ತುರುಕಿ ಮೇಲೆ ಬಂದು ಮತ್ತೆ ಎಂದಿನಂತೆ ಮಂಚದ ಮೇಲೆ ಉರುಳಿದ.

ಉದ್ವೇಗದಿಂದ ಅವನ ಮೈಯಿಡೀ ಕಂಪಿಸುತ್ತಿತ್ತು. ಧೂಮಪಾನ ಮಾಡಲು ಅವನ ಮನಸ್ಸು ಹಾತೊರೆಯುತ್ತಿದ್ದರೂ ಕಷ್ಟಪಟ್ಟು ಹತ್ತಿಕ್ಕಿಕೊಂಡ. ದೀರ್ಘ ಶ್ವಾಸ ತೆಗೆದು ಶಾಂತನಾಗಿರಲು ಪ್ರಯತ್ನಿಸುತ್ತಾ ತನ್ನ ಕಾರ್ಯಯೋಜನೆಯನ್ನು ಮತ್ತೊಮ್ಮೆ ವಿಮರ್ಶಿಸಿದ. ತಾನು ಹೆಣೆದ ಬಲೆಯೊಳಗೆ ಹನ್ನಾ ಬಿದ್ದು ವಿಲವಿಲನೆ ಒದ್ದಾಡುತ್ತಿರುವ ದೃಶ್ಯ ನೋಡಲು ಅವನ ಮನಸ್ಸು ಕಾತರಿಸುತ್ತಿತ್ತಾದರೂ ಇದರೊಳಗೆ ಭಾಗಿಯಾಗಲು ಅವನ ಆರೋಗ್ಯದ ದಸೆಯಿಂದ ಸಾಧ್ಯವಿರಲಿಲ್ಲ. ಶೀಘ್ರದಲ್ಲೇ ತೆರೆದುಕೊಳ್ಳುವ ನಾಟಕದಲ್ಲಿ ಅವನು ಕೇವಲ ಬಲಿಪಶುವಾಗಿ ಉಳಿಯಲು ನಿರ್ಧರಿಸಿದ.

ಭೋರ್ಗರೆಯುವ ಮಳೆ ಮತ್ತು ಗಾಳಿಯ ಸದ್ದಿಗೆ ಕಿವಿಗೊಡುತ್ತಾ ಅವನು ಬಹಳ ಹೊತ್ತು ಹಾಗೇ ಬಿದ್ದುಕೊಂಡಿದ್ದ. ಆ ವಿಶಾಲ ಮನೆಯೊಳಗೆ ಕವುಚಿಕೊಂಡಿದ್ದ ಮೌನದ ಭೀಕರತೆಯಲ್ಲಿ, ಹೆಂಡತಿ ತೀರಿಕೊಂಡ ನಂತರ ಇದೇ ಮೊದಲ ಭಾರಿ ತಾನು ಈ ಮನೆಯಲ್ಲಿ ಏಕಾಂಗಿಯಾಗಿರುವುದು ಎಂಬ ಸಂಗತಿ ಅವನ ಮನಸ್ಸಿಗೆ ಬಂದಿತು. ಇನ್ನೊಂದು ಸಂಗತಿಯೂ ಅವನ ಮನಸ್ಸಿಗೆ ಹೊಳೆಯಿತು. ತನ್ನ ಹೆಂಡತಿಯ ಸಮಾಧಿಯನ್ನು ತೆರೆಯುವುದು ಈಗ ಅನಿವಾರ್ಯವಾಗಿತ್ತು. ಸತ್ತವರಿಗೆ ಉಪದ್ರವ ಕೊಡುವ ವಿಚಾರ ಅವನಿಗೇಕೋ ಸರಿ ಕಾಣಲಿಲ್ಲ.

ಅವನು ಎದ್ದು ಕುಳಿತು ದಿಂಬಿನಡಿಯಿದ್ದ ಕೈಗಡಿಯಾರವನ್ನು ಹೊರತೆಗೆದು ನೋಡಿದ. ಹನ್ನಾ ವಾಪಸ್ಸು ಬರುವ ಹೊತ್ತಾಯಿತೆಂದು ಅವನು ಅಂದಾಜಿಸಿದ. ಇನ್ನೇನು ಮುಂಬಾಗಿಲು ತೆರೆಯುವ ಹೊತ್ತು. ಅವನು ಮತ್ತೆ ಅಡ್ಡಾಗಿ ತನ್ನ ಯೋಜನೆಗೆ ತೃಪ್ತಿ ಪಡುತ್ತಾ ಕಣ್ಣು ಮುಚ್ಚಿಕೊಂಡ.

ಮನೆಯೊಳಗಿನ ನೀರವ ಮೌನ ಅವನನ್ನು ಹುಚ್ಚನನ್ನಾಗಿಸುತ್ತಿತ್ತು. ಈ ದರಿದ್ರ ಹೆಂಗಸು ಇಷ್ಟೊತ್ತು ಎಲ್ಲಿಗೋದಳು? ಡಾಕ್ಟರ್ ಸಿಗದಿದ್ದರೂ ಕೂಡ ಇಷ್ಟರಲ್ಲಿ ವಾಪಸ್ಸಾಗಬೇಕಿತ್ತು. ಅವನಿಗೆ ಸಿಟ್ಟು ಏರುತ್ತಲಿತ್ತು.

ಮಳೆ ಗಾಳಿಯ ಸದ್ದು ತುಸು ಕಡಿಮೆಯಾದಂತೆನಿಸಿ ಕೆಳಗೆ ಹೆಜ್ಜೆಗಳ ಸಪ್ಪಳ ಕೇಳಿಸಿದಂತಾಯಿತು. ಬೀಗದೊಳಗೆ ಚಾವಿ ತೂರುವ ಸದ್ದು ಕೇಳಿಸಿಕೊಳ್ಳಲು ಅವನ ಕಿವಿಗಳು ನೆಟ್ಟಗಾದವು. ಇನ್ನೇನು. ಈ ಭಯಂಕರ ಮೌನವನ್ನು ಸರಿಸಿ ಹನ್ನಾ ಬರುತ್ತಾಳೆ. ಆದರೆ, ಹೆಜ್ಜೆಗಳ ಸಪ್ಪಳ ಈಗ ಕೇಳಿಸುತ್ತಿರಲಿಲ್ಲ. ಬೀಗ ತೆರೆಯಲಿಲ್ಲ. ಹಾಗಾದರೆ ತಾನು ಕೇಳಿಸಿಕೊಂಡ ಹೆಜ್ಜೆಗಳ ಸಪ್ಪಳ ಯಾರದು?

ಆತಂಕದಿಂದ ಅವನ ಬೆನ್ನಿನ ಮೇಲೆ ಮಂಜುಗಡ್ಡೆ ಹರಿದಂತಾಗಿ ಮೈಯ ರೋಮಗಳೆಲ್ಲಾ ತಂತಿಗಳಂತೆ ನೆಟ್ಟಗಾದವು. ಅವನು ಕಂಪಿಸತೊಡಗಿದ. 'ನೀನು ಸಾವಿಗೆ ಪಣವೊಡ್ಡಿ ಸೋತು ಹೋದೆ ಸ್ಪೆನ್ಸರ್! ಇದಕ್ಕೆ ತಕ್ಕ ಶಾಸ್ತಿ ನಿನಗೆ ಆಗಲೇ ಬೇಕು! ಹ್ಹ... ಹ್ಹ!' ಯಾರೋ ಅವನ ಕಿವಿಯಲ್ಲಿ ಉಲಿದು ಗಹಗಹಿಸಿ ನಕ್ಕಂತಾಯಿತು.

ಹೆದರಿಕೆಯಿಂದ ಸ್ಪೆನ್ಸರ್ ಗಟ್ಟಿಯಾಗಿ ಕಣ್ಣು ಮುಚ್ಚಿಕೊಂಡ. ಹನ್ನಾ, ಡಾಕ್ಟರನ ಜೊತೆಯಲ್ಲೇ ಬರಲು ಕಾಯುತ್ತಾ ನಿಂತಿರಬೇಕು.

ಈಗ ಸ್ಪೆನ್ಸರನಿಗೆ ಬೇರೆಯದೇ ರೀತಿಯ ಸಪ್ಪಳ ಕೇಳಿಸತೊಡಗಿತು. ಕಿವಿಗೊಟ್ಟು ಆಲಿಸಿದರೆ ಮಾತ್ರ ಕೇಳಿಸುವ ಕ್ಷೀಣ ಹೆಜ್ಜೆಗಳ ಸಪ್ಪಳ. ಅವನು ದಿಢೀರನೆ ಮಂಚದ ಮೇಲೆ ಎದ್ದು ಕುಳಿತುಕೊಂಡ. ಅವನ ಎದೆ ಡವಗುಟ್ಟುತ್ತಿತ್ತು. ಮತ್ತದೇ ಅಸ್ಪಷ್ಟ, ಬೆಕ್ಕಿನ ಹೆಜ್ಜೆಗಳು. ಪಿಸುಗುಟ್ಟಿದಂತೆ.